ಶನಿವಾರಸಂತೆಯಿಂದ ನೂರ ಐವತ್ತು ಏಲಕ್ಕಿ ಸಸಿಗಳನ್ನು ತಂದು ಪೋಷಣೆ। ಗುಣಮಟ್ಟದ 1ಕೆ.ಜಿ. ಏಲಕ್ಕಿಗೆ 3 ರಿಂದ 5 ಸಾವಿರದ ವರೆಗೂ ಬೆಲೆ ಲಭ್ಯ

ಸಮಗ್ರ ಕೃಷಿಯಲ್ಲಿ ಏಲಕ್ಕಿ ಬೆಳೆಯಿಂದ ಹೆಚ್ಚಿನ ಆದಾಯ

ಸಂ.ಕ. ಸಮಾಚಾರ, ಮಾಗಡಿ

ತಮ್ಮಜಮೀನಿನಲ್ಲಿವಿಭಿನ್ನ ಬೆಳೆಬೆಳೆಯಬೇಕೆಂದುಆಂದುಕೊಂಡ ರೈತ ಸಮಗ್ರ ಕೃಷಿ ಬೆಳೆಗಳಲ್ಲಿ ಏಲಕ್ಕಿ ಬೆಳೆಯನ್ನು ಬೆಳೆಯುವ ಮೂಲಕ ಹೆಚ್ಚಿನ ಆದಾಯ ಗಳಿಸುವತ್ತ ದಾಪುಗಾಲು ಇಟ್ಟಿದ್ದಾರೆ.

ತಾಲೂಕಿನ ಜುಟ್ಟನಹಳ್ಳಿ ಶ್ರೀನಿವಾಸ್ ಎಂಬುವರು ತಮ್ಮ 3ಎಕರೆ ಜಮೀನಿನಲ್ಲಿ ವಿವಿಧ ಬೆಳೆಗಳನ್ನು ಬೆಳೆದಿದ್ದು ಅದರಲ್ಲಿ ಏಲಕ್ಕಿ ಬೆಳೆ ಸಮೃದ್ಧಿಯಾಗಿ ಬಂದಿದ್ದು 8 ತಿಂಗಳಲ್ಲಿ ಹತ್ತು ಕೆ.ಜಿ. ವರೆಗೂ ಏಲಕ್ಕಿಯನ್ನು ಬಿಡಿಸಲಾಗಿದೆ. ಇನ್ನೂ ಕೂಡ ತೋಟದ ತುಂಬೆಲ್ಲಾ ಏಲಕ್ಕಿ ಬೆಳೆ ರಾಶಿ ರಾಶಿಯಾಗಿ ಬರುತ್ತಿದ್ದು ಹೆಚ್ಚು ಖರ್ಚು ಮಾಡದೆ ಹೆಚ್ಚಿನ ಲಾಭದಾಯಕದತ್ತ ಮುಖ ಮಾಡಿದ್ದು ಏಲಕ್ಕಿ ಬೆಳೆಬೆಳೆಯಲು ಸಾಧ್ಯವಿಲ್ಲ ಎಂದು ತಿಳಿಸಿದರೂ ಕೂಡ ಏಕೆ ಪ್ರಯೋಗ ಮಾಡಬಾರದೆಂದು ತಮ್ಮ ತೋಟದಲ್ಲಿ ನೂರ ಐವತ್ತು ಏಲಕ್ಕಿ ಸಸಿಗಳನ್ನು ಶನಿವಾರಸಂತೆಯಿಂದ ತಂದು ಬೆಳಿಸಿ ಪೋಷಣೆ ಮಾಡಿದ್ದು ಅದರಲ್ಲಿ ಇಪ್ಪತ್ತು ಗಿಡ ಹೋಗಿ ನೂರು ಮೂವತ್ತು ಗಿಡ ಕೂಡ ಸಮೃದ್ಧಿಯಾಗಿ ಬಂದಿದ್ದು ಎಲ್ಲಾ ಗಿಡದಲ್ಲೂ ಏಲಕ್ಕಿ ಸಮೃದ್ಧಿಯಾಗಿ ಬಂದಿದ್ದು ರೈತ ಹರ್ಷ ವ್ಯಕ್ತಪಡಿಸಿದ್ದು ಬೇರೆ ರೈತರು ಕೂಡ ತಮ್ಮ ಜಮೀನಿನಲ್ಲಿ ಕಡಿಮೆ ನೀರಿನಲ್ಲಿ ಏಲಕ್ಕಿಯನ್ನು ಬೆಳೆದು



ಮಾಗಡಿ ತಾಲೂಕಿನ ಜುಟ್ಟನಹಳ್ಳಿಯ ಶ್ರೀನಿವಾಸ್ ತಮ್ಮ ತೋಟದಲ್ಲಿ ಏಲಕ್ಕಿ ಬೆಳೆ ಬೆಳೆದಿರುವುದು.

ಕೈತುಂಬ ಹಣ ಗಳಿಸಬಹುದೆಂದು ರೈತ ಶ್ರೀನಿವಾಸ ಹೇಳುತ್ತಾರೆ.

ಕೆ.ಜಿ.ಗೆ 5ಸಾವಿರ ಬೆಲೆ: ಮಾರುಕಟ್ಟೆಯಲ್ಲಿಗುಣಮಟ್ಟದ 1ಕೆ.ಜಿ. ಏಲಕ್ಕಿಗೆ 5 ಸಾವಿರದಿಂದ 3 ಸಾವಿರದವರೆಗೂ ಮಾರುಕಟ್ಟೆಯಲ್ಲಿ ಬೆಲೆ ಇದ್ದು ಇಲ್ಲಿಯವರೆಗೂ ಹತ್ತು ಕೆಜಿಯವರೆಗೂ ಏಲಕ್ಕಿ ಬೆಳೆದಿದ್ದು ನಮ್ಮ ತೋಟದಿಂದ ಮತ್ತಷ್ಟು ಏಲಕ್ಕಿಯನ್ನು ಕತ್ತು ಒಂದೇ ಬಾರಿಗೆ ಮಾರುಕಟ್ಟೆಗೆ ಹಾಕುವ ಆಲೋಚನೆಯನ್ನು ಇಟ್ಟುಕೊಂಡಿದ್ದು ರೈತರು ಏಲಕ್ಕಿ ಬೆಳೆಯನ್ನು ಕಡಿಮೆ ಖರ್ಚಿನಲ್ಲಿ ಕಡಿಮೆ ನೀರಿನಲ್ಲಿ ಬೆಳೆದು ಲಾಭ ಗಳಿಸಬಹುದು ಎಂದು ತೋರಿಸಿಕೊಟ್ಟಿದ್ದಾರೆ.

3 ಎಕರೆ ತೋಟದಲ್ಲಿವಿವಿಧ ಬೆಳೆಗಳನ್ನು ಬೆಳೆದಿದ್ದು, ಆದರಲ್ಲಿ ತೆಂಗು, ಆಡಿಕೆ, ಆಪಲ್, ನೆಲ್ಲಿ, ಬಾಳೆ, ಗಿಡ, ಓಗೆ ವಿವಿಧ ಗಿಡಗಳನ್ನು ತಮ್ಮ ತೋಟದಲ್ಲಿಪಾಕುವಮೂಲಕ ಸಮಗ್ರ ಕೃಷಿಮೂಲಕ ಎಲ್ಲಾ ಬೆಳೆಗಳನ್ನು ಬೆಳೆದು ಲಾಭಗಳಿಸುವತ್ತ ಮುಖ ಮಾಡಿದ್ದು ವ್ಯವಸಾಯದಿಂದ ಯಾರೂ ಕೂಡ ನಷ್ಟಕ್ಕೆ ಒಳಗಾಗುವುದಿಲ್ಲ ಎಂದು ಶ್ರೀನಿವಾಸ್ ತಿಳಿಸಿದ್ದಾರೆ.ಮಳೆಯಾಶ್ರಿತ ಪ್ರದೇಶ ದಲ್ಲೂ ಕೂಡ ಏಲಕ್ಕಿ ಬೆಳೆಯನ್ನು ಉತ್ತಮವಾಗಿ ಬೆಳೆಯಬಹುದು ಎಂದು ತೋರಿಸಿಕೊಟ್ಟಿರುವ ಶ್ರೀನಿವಾಸ್ ತಾಲ್ಲೂಕಿನ ರೈತರಿಗೆ ಮಾದರಿಯಾಗಿದ್ದು ಏಲಕ್ಕಿ ಬೆಳೆ ಈಗ ಆಕರ್ಷಣೆಯ ಕೇಂದ್ರವಾಗಿ ಮಾರ್ಪಟ್ಟಿದೆ.

22-09-2022
Samyuktha Karnataka p.8A

ಕೇಂದ್ರದ 'ಪ್ರಣಾಮ' ಏನಿದು ಯೋಜನೆ? ನ್ಯೂಸ್ ಕಫೆ

ಕೃಷಿಯಲ್ಲಿ ರಾಸಾಯನಿಕ ಗೊಬ್ಬರ ಬಳಕೆಯನ್ನು ಕಡಿಮೆ ಮಾಡಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಪ್ರಣಾಮ್ ಎಂಬ ಯೋಜನೆಯನ್ನು ಪರಿಚಯ ಮಾಡಲು ಮುಂದಾಗಿದೆ. ರಸಗೊಬ್ಬರದ ಮೇಲಿನ ಸಬ್ಸಿಡಿ ಹೊರೆಯನ್ನು ಕಡಿಮೆ ಮಾಡಿಕೊಳ್ಳಬೇಕು ಎಂಬುದು ಇದರ ಪ್ರಮುಖ ಉದ್ದೇಶ ಎಂದೇ ವಿಶ್ಲೇಷಿಸಲಾಗಿದೆ. ಹಾಗಾದರೆ, ಏನಿದು ಪ್ರಣಾಮ್ ಯೋಜನೆ?

ಪಿಎಂ-ಪ್ರಣಾಮ್ ಯೋಜನೆ

ಪ್ರಧಾನಮಂತ್ರಿ ಕೃಷಿ ನಿರ್ವಹಣೆಯಲ್ಲಿ ಪರ್ಯಾಯ ಪೋಷಕಾಂಶಗಳ ಉತ್ತೇಜನ(ಪಿಎಂ-ಪ್ರಣಾಮ್) ಯೋಜನೆಯು ದೇಶದಲ್ಲಿ ರಸಗೊಬ್ಬರ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂಬ ಉದ್ದೇಶದಿಂದ ರೂಪಿಸಲಾಗಿದೆ. ಮೂಲಗಳು ಹೇಳುವಂತೆ, ಸದ್ಯದಲ್ಲೇ ಇದು ಜಾರಿಗೆ ಬರಲಿದೆ. ವರ್ಷವೊಂದರಲ್ಲಿ ಕಡಿಮೆ ರಸಗೊಬ್ಬರ ಬಳಕೆ ಮಾಡುವ ರಾಜ್ಯಕ್ಕೆ ಇನ್‌ಸೆಂಟೀವ್ ನೀಡಲಾಗುತ್ತದೆ. ಜತೆಗೆ, ಮೂರು ವರ್ಷಗಳ ಅಂದಾಜು ತಗ್ಗದುಕೊಂಡು, ಕಡಿಮೆ ರಸಗೊಬ್ಬರ ಬಳಕೆ ಮಾಡಿದ್ದರೆ ಅದಕ್ಕೂ ಪ್ರೋತ್ಸಾಹ ಧನ ನೀಡಲಾಗುತ್ತದೆ.

ಯಾವಾಗ ಜಾರಿ?

ಸೆ.7ರಂದು ನಡೆದ ಸಭೆಯಲ್ಲಿ ಇದರ ಪ್ರಸ್ತಾಪವಾಗಿದೆ. ಅಂತರ ಸಚಿವಾಲಯಗಳ ನಡುವಿನ ಚರ್ಚೆ ಬಳಿಕ ಇದನ್ನು ಜಾರಿಗೊಳಿಸಬಹುದು ಎಂದು ಹೇಳಲಾಗಿದೆ.



ಯೋಜನೆಯ ಜಾರಿ ಉದ್ದೇಶವೇನು?

ಕೇಂದ್ರದ ಖಿಜಾನೆ ಮೇಲಿನ ಹೊರೆ ತಪ್ಪಿಸುವುದೇ ಇದರ ಪ್ರಮುಖ ಉದ್ದೇಶ. ಭಾರತದಲ್ಲಿ ಮುಖ್ಯವಾಗಿ ಯೂರಿಯಾ, ಡಿಎಪಿ, ಎಂಒಪಿ, ಎನ್‌ಪಿಕೆಎಸ್ ಅನ್ನು ಹೆಚ್ಚಾಗಿ ಬಳಕೆ ಮಾಡಲಾಗುತ್ತಿದೆ. 2017-18ರಿಂದ 2021-22ರ ಅವಧಿಯಲ್ಲಿ ಈ ರಸಗೊಬ್ಬರದ ಬಳಕೆ ಪ್ರಮಾಣ ಶೇ.21ರಷ್ಟು ಹೆಚ್ಚಾಗಿದೆ. ಬಳಕೆ ಪ್ರಮಾಣ ಹೆಚ್ಚಾದಂತೆ, ಕೇಂದ್ರ ನೀಡಬೇಕಾಗಿರುವ ಸಬ್ಸಿಡಿ ಪ್ರಮಾಣವೂ ಹೆಚ್ಚಾಗುತ್ತದೆ. ಅಂದರೆ, ಕಳೆದ ವರ್ಷ ರಸಗೊಬ್ಬರ ಸಬ್ಸಿಡಿಗಾಗಿ ಕೇಂದ್ರ ಸರ್ಕಾರ 1.62 ಲಕ್ಷ ಕೋಟಿ ರೂ. ವ್ಯಯ ಮಾಡಿತ್ತು. ಈ ವರ್ಷ 2.25 ಲಕ್ಷ ಕೋಟಿ ರೂ. ವ್ಯಯಿಸಲಾಗುತ್ತಿದೆ. ಈ ಹೊರೆಯನ್ನು ತಪ್ಪಿಸುವ ಉದ್ದೇಶ ಕೇಂದ್ರದ್ದು.

22-09-2022
Udaya vani p.06

Rain deficit to reduce kharif output by 4%

Better Coarse-Grain Produce Will Slightly Bridge Gap

Vishwa.Mohan
@timesgroup.com

New Delhi: Production of kharif (summer sown) foodgrains is expected to decline by nearly 4% with the biggest slide of 6% being recorded in the output of paddy during 2022-23 crop year over 2021-22 due to drought conditions in certain states, including UP, Bihar and Punjab, that witnessed significant monsoon rainfall deficit this year.

First advance estimates of kharif crops, released by the agriculture ministry on Wednesday, showed the estimated overall production of foodgrain at nearly 150 million tonnes (MT) in 2022-23 compared to 156 MT in previous year.

As far as paddy is concerned, the decline is expected to be around 7 million tonnes in the current crop year (July-June cycle) compared to 2021-22.

Improvement in production of coarse cereals (millets and maize) has, however, slightly bridged the estimated output gap, thanks to maize whose production due to crop diversification efforts during 2022-23 is estimated at record 23 MT which is higher by over 3 MT than its average production (average of last five years) of 20 MT.

ESTIMATES OF PRODUCTION



Though overall production of kharif foodgrain is expected to decline, the estimated output at 150 MT is still higher by nearly 7 MT than the average foodgrain production of the previous five years ((2016-17 to 2020-21). Even the estimated output of paddy at 105 MT is higher by over 4 MT than the average of previous five years.

Among non-foodgrain, output of kharif oilseeds is expected to be around 24 MT while production of sugarcane is estimated at a record 465 MT. The production of sugarcane during 2022-23 is higher by nearly 92 MT than the average sugarcane production of 373 MT. Cotton output is also expected to be higher this year.

Officials in the agriculture ministry said though these figures may change during the subsequent three estimates, the overall production during 2022-23 crop year would depend on the Rabi (winter) crops' sowing that will decide the fate of wheat acreage.

22-09-2022
Times of India Spl page

ರೇಷ್ಮೆ ಹೈಟೆಕ್ ಮಾರುಕಟ್ಟೆ ನಿರ್ಮಾಣಕ್ಕೆ ನಿರ್ಧಾರ

ಬೆಂಗಳೂರು: 'ರೇಷ್ಮೆ ಮಾರುಕಟ್ಟೆಗಳಲ್ಲಿ ಇ-ಹರಾಜು ವ್ಯವಸ್ಥೆ ಜಾರಿಗೊಳಿಸಲಾಗುತ್ತಿದ್ದು, ವಿವಿಧೆಡೆ ಹೈಟೆಕ್ ಮಾರುಕಟ್ಟೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದು ರೇಷ್ಮೆ ಸಚಿವ ನಾರಾಯಣಗೌಡ ತಿಳಿಸಿದರು.

ಕರ್ನಾಟಕ ರೇಷ್ಮೆಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಮಾರಾಟ ವಿನಿಮಯ) ತಿದ್ದುಪಡಿ ಮಸೂದೆ ಮಂಡಿಸಿ ಮಾತನಾಡಿದ ಅವರು, 'ರಾಮನಗರದಲ್ಲಿ ₹75 ಕೋಟಿ ಮತ್ತು ಶಿಡ್ಲಘಟ್ಟದಲ್ಲಿ ₹30 ಕೋಟಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಕಲಬುರಗಿ, ಹಾವೇರಿಯಲ್ಲೂ ಹೈಟೆಕ್ ಮಾರುಕಟ್ಟೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದು ತಿಳಿಸಿದರು.

'ಸರ್ವರ್ ಸಮಸ್ಯೆಯು ಸಹ ಈಗ ಬಹುತೇಕ ಬಗೆಹರಿದಿದೆ. ಆರ್‌ಟಿಜಿಎಸ್ ವ್ಯವಸ್ಥೆ ಮೂಲಕ ರೈತರಿಗೆ ಹಣ ಪಾವತಿಸುವ ವ್ಯವಸ್ಥೆ ಮಾಡಿರುವುದರಿಂದ ರೈತರಿಗೂ ಅನುಕೂಲವಾಗಿದೆ' ಎಂದು ತಿಳಿಸಿದರು.

22-09-2022
Prajavani p.04

ಹೈನುಗಾರಿಕೆ ರೈತರಿಗೆ ವರದಾನ



ತಾವರೆಕೆರೆ: ಗ್ರಾಮೀಣ ಪ್ರದೇಶಗಳಲ್ಲಿ ರೈತರ ಬದುಕನ್ನು ಹಸನು ಮಾಡಲು ಹೈನುಗಾರಿಕೆ ಮುಖ್ಯವಾದ ಕಸುಬು ಎಂದು ಸಂಘದ ಅಧ್ಯಕ್ಷ ಕೆ..ಉಮಾಶಂಕರ್ ಹೇಳಿದರು. ನಂದಗುಡಿ ಹೋಬಳಿ ತಾವರೆಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಸುಗಳ ಆರೋಗ್ಯ ಕಾಪಾಡುವುದರ ಜೊತೆಗೆ ಸ್ವಚ್ಛತೆ ಕಾಪಾಡಿದರೆ ಹಾಲಿನ ಗುಣಮಟ್ಟ ಹೆಚ್ಚುತ್ತದೆ. ಪೌಷ್ಠಿಕಾಂಶ ಭರಿತ ಹಾಲಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. ಬರ ಪರಿಸ್ಥಿತಿ ನಡುವೆ ಹೈನುಗಾರಿಕೆ ಅವಲಂಭಿಸಿರುವ ಕುಟುಂಬಗಳು ಆರ್ಥಿಕ ಮುಗ್ಗಟ್ಟು ನಿವಾರಿಸಿಕೊಂಡು ಹೋಗಲು ಇದರಿಂದ ಸಾಧ್ಯವಾಗಿದೆ. ರೈತರ ಕುಟುಂಬಗಳಿಗೆ ಅಧಿಕ ಲಾಭ ತಂದು ಕೊಡುವ ಹೈನುಗಾರಿಕೆ ಪ್ರಗತಿಗೆ ಪೂರಕವಾಗಿದೆ. ಕೃಷಿಯ ಜೊತೆಗೆ ಉಪಕಸುಬಾಗಿ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಿಕೊಂಡರೆ ರೈತರು ಬದುಕಿನಲ್ಲಿ ಸ್ಥಿರತೆ ಕಾಪಾಡಿಕೊಳ್ಳಬಹುದು ಎಂದರು. ಎಂಪಿಸಿಎಸ್ ಮಾತನಾಡಿ, ಉತ್ಪಾದಕರು ಒಳ್ಳೆ ಗುಣಮಟ್ಟದ ಹಾಲು ಹಾಕುವುದರಿಂದ ಸಂಘ ಲಾಭಗಳಿಸಬಹುದು. ಈ ವರ್ಷ ಸಂಘಕ್ಕೆ ನಿವ್ವಳ ಲಾಭ 3.75 ಲಕ್ಷ ರೂ. ಬಂದಿದ್ದು, ಉತ್ತಮ ರೀತಿಯಲ್ಲಿ ಸಂಘ ನಡೆದುಕೊಂಡು ಹೋಗುತ್ತಿದೆ. ಸಹಕಾರ ತತ್ವ ಪಾಲನೆ ಇಂದ ಗ್ರಾಮದಲ್ಲಿ ಪ್ರಗತಿ ಕಂಡಿದೆ. ಹಾಲು ಉತ್ಪಾದಕರೆಲ್ಲರೂ ಗುಣಮಟ್ಟದ ಹಾಲು ಉತ್ಪಾದನೆ ಮಾಡುವ ಮೂಲಕ ಅಧಿಕ ಲಾಭ ಗಳಿಸಬೇಕು. ರೈತರು ಹೈನುಗಾರಿಕೆಯನ್ನು ಹೆಚ್ಚಾಗಿ ಅವಲಂಭಿಸಿದ್ದಾರೆ. ಮಳೆಯಿಂದ ಮೇವಿನ ಕೊರತೆ ನೀಗಿದೆ, ರಾಸುಗಳು ಹಾಲು ಕೊಡುವ ಪ್ರಮಾಣ ಹೆಚ್ಚಾಗಿದೆ. ಹಾಲಿನಲ್ಲಿ ಗುಣಮಟ್ಟ ಕಾಪಾಡಿಕೊಳ್ಳಬೇಕಾದರೆ ಸಮಯಕ್ಕೆ ಸರಿಯಾಗಿ ಪೌಷ್ಠಿಕ ಆಹಾರ ನೀಡಬೇಕು ಎಂದರು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಅಧಿಕ ಅಂಕ ಗಳಿಸಿರುವ ಸಂಘದ ಸದಸ್ಯರ ಮಕ್ಕಳಿಗೆ ಬಮೂಲ್ ವತಿಯಿಂದ ಪ್ರತಿಭಾ ಪುರಸ್ಕಾರ ಮಾಡಲಾಗುತ್ತಿದೆ ಎಂದು ಸಹ ಅವರು ಇದೇವೇಳೆ ಹೇಳಿದರು.

22-09-2022
Hosa Digantha p.07